# ಮಾವೋರ ಮೇಲೆ ವೈಯಕ್ತಿಕ ದಾಳಿ ಮಾಡಿ ಬಯಲಾದ ಮಂಗ್ಳೂರ ವಿಜಯರ  ಮುಖ

ಮಂಗಳೂರು ವಿಜಯ ಅವರು ಕ್ರಾಂತಿಕಾರಿ ನಾಯಕ ಚೀನಾದ ಮಾವೋರ ಕುರಿತು 'ಮಾವೋ ಮರೆಮಾಚಿದ ಮುಖ' ಎಂಬ ಪುಸ್ತಕವೊಂದನ್ನು ಬರೆದಿದ್ದಾರೆ. 2008ರಲ್ಲಿ ಬಿಡುಗಡೆಯಾದ ಈ ಪುಸ್ತಕ ಸಿರಿವರ ಪ್ರಕಾಶನ ಪ್ರಕಟಿಸಿದೆ. ಮಾವೋ ಕುರಿತಾದ ಪುಸ್ತಕಗಳು ಕನ್ನಡದಲ್ಲಿ ಬಂದಿರುವುದು ಬಹಳ ಕಡಿಮೆ. ಆಂಗ್ಲ ಭಾಷೆಯಲ್ಲಿ ಸಾಕಷ್ಟು ಬಂದಿವೆ. ಅದರಲ್ಲಿ ಚೀನಾದ ಕ್ರಾಂತಿಯ ವಾಸ್ತವ ಅಂಶಗಳನ್ನು ಖುದ್ದಾಗಿ ಅಭ್ಯಸಿಸಿ ಜಗತ್ತಿನ ಜನರಿಗೆ ತಿಳಿಯಪಡಿಸಿದ ಪ್ರಸಿದ್ಧ ಎಡ್ಗರ್ ಸ್ನೋರಂಥವರು ಬರೆದ ಉಪಯುಕ್ತವಾದ ಪುಸ್ತಕಗಳಿದ್ದರೆ, ಸಾಮ್ರಾಜ್ಯಶಾಹಿ ಅದರಲ್ಲೂ ಅಮೇರಿಕನ್ ಸಾಮ್ರಾಜ್ಯವಾದ ರೂಪುಗೊಳಿಸಿದ ಕಮ್ಯೂನಿಸ್ಟ್ ಕ್ರಾಂತಿಕಾರಿಗಳ ವಿರುದ್ಧದ ದಾಳಿಕೋರ, ಚಾರಿತ್ರಹರಣ ಮಾಡುವ ಪುಸ್ತಕಗಳೂ ಸಾಕಷ್ಟಿವೆ. ಸಾಮ್ರಾಜ್ಯಶಾಹಿ ತನ್ನ ಅಸಹ್ಯಕರ ವೈಯಕ್ತಿಕ ದಾಳಿಗಳನ್ನು ಮಾರ್ಕ್ಸ್, ಲೆನಿನ್‌ರಂತಹ ಜಗತ್ತು ಕಂಡ ಪಥ ನಿರೂಪಕ ಕ್ರಾಂತಿಕಾರಿ ಬೋಧಕರ ಕುರಿತು ನಿರಂತರವಾಗಿ ಮಾಡುತ್ತಲೇ ಬರುತ್ತಿದೆ.

ದಲಿತ ಚಳುವಳಿಯ ಜೊತೆ ನಾಯಕತ್ವ ಸ್ತರದಲ್ಲಿ ಗುರುತಿಸಿಕೊಂಡಿದ್ದ ಮಂಗ್ಳೂರ ವಿಜಯ ದಲಿತ ಚಳುವಳಿಯ ಅವನತಿಗೆ ಕಾರಣರಾದ ನಾಯಕತ್ವದಲ್ಲೂ ಒಬ್ಬರಾಗಿದ್ದಾರೆ ಎಂಬುದು ತಿಳಿದಿರುವ ವಿಚಾರವೇ ಆಗಿದೆ. ಈಗ ಚಳುವಳಿಯಿಂದಲೇ ದೂರ ಇರುವ ಇವರು ಬರಹಗಳನ್ನು ಬರೆಯುತ್ತಿದ್ದಾರೆ. ಮಂಗ್ಳೂರ ವಿಜಯರು ಸಮಾಜವಾದಿಯೆಂದು ತಮ್ಮನ್ನು ಬಿಂಬಿಸಿಕೊಳ್ಳುತ್ತಿದ್ದರೂ ಬಂಡವಾಳಶಾಹಿ ಚಿಂತನೆಗಳಿಂದ ಕೂಡಿದ್ದಾರೆ. ಅವರು ಪ್ರತಿಪಾದಿಸುವ ಪ್ರಜಾತಂತ್ರ ಬಹುಸಂಖ್ಯಾತ ಜನರಿಗೆ ಸಿಗದ ಬಂಡವಾಳಶಾಹಿ ಪ್ರಜಾತಂತ್ರವಾಗಿದೆ. ಇದು ಅವರು ಬರೆದ ಮಾವೋರ ಕುರಿತಾದ ಪುಸ್ತಕದಲ್ಲೂ ಸ್ಪಷ್ಟವಾಗಿದೆ. ಮಾವೋರ ಕಾಲದಲ್ಲಿ ಬಂಡವಾಳಶಾಹಿ ಪಥ ಹಿಡಿದಿದ್ದಾರೆಂದು ತೀವ್ರವಾದ ಕ್ರಮಕ್ಕೆ ಒಳಗಾಗಿದ್ದ ಡೆಂಗ್ ಕ್ಸಿಯೋಪಿಂಗ್‌ರನ್ನು ಮಂಗ್ಳೂರ ವಿಜಯರು ತಮ್ಮ ಪುಸ್ತಕದಲ್ಲಿ ಹಾಡಿ ಹೊಗಳಿದ್ದಾರೆ. ಸಮಾಜವಾದಿ ಚೀನಾವನ್ನು ಬಂಡವಾಳಶಾಹಿಯಾಗಿ ಪ್ರಜ್ಞಾಪೂರ್ವಕವಾಗಿ ಬದಲಾಯಿಸಿದ ಸಾಮ್ರಾಜ್ಯಶಾಹಿ ಏಜೆಂಟ್ ಎಂದೇ ಜಗತ್ತಿನ ಕಮ್ಯೂನಿಸ್ಟ್ ಕ್ರಾಂತಿಕಾರಿಗಳಿಂದ ತೀವ್ರ ಟೀಕೆಗಳಿಗೆ ಒಳಗಾಗಿರುವ ಡೆಂಗ್ ಕ್ಸಿಯೋಪಿಂಗ್‌ರು ಮಂಗ್ಳೂರ ವಿಜಯರಿಗೆ ಬಹಳ ಆಪ್ತವಾಗುತ್ತಾರೆ. ಸಮಾಜವಾದಿ ವ್ಯವಸ್ಥೆಯನ್ನು ರಕ್ಷಿಸಿ ಬೆಳೆಸಲು ಮಾವೋರು ಆರಂಭಿಸಿದ ಮಹಾನ್ ಸಾಂಸ್ಕೃತಿಕ ಕ್ರಾಂತಿಯನ್ನು ವಿಕೃತಗೊಳಿಸಿ ತಮ್ಮ ಪುಸ್ತಕದಲ್ಲಿ ಬರೆದುಕೊಂಡಿದ್ದಾರೆ.

ತಮ್ಮ ಆರಂಭಿಕ ಮಾತುಗಳಲ್ಲಿ ವಿಜಯರು, "ಮಾವೋ ಇರಲಿ ಇನ್ಯಾರೇ ಇರಲಿ ಆರಾಧಿಸುವ ಬದಲು ಅಧ್ಯಯನ ಮಾಡುವ, ವಿಶ್ಲೇಷಣೆ ಮಾಡುವ ಹಾಗೂ ಸಮಕಾಲೀನಗೊಳಿಸುವ ದಾರಿ ಅರ್ಥಪೂರ್ಣ ...... ಎಂದು ಹೇಳುತ್ತಾ ಈ ಕೃತಿಯ ರಚನೆಯಲ್ಲಿ ಈ ದೃಷ್ಟಿಯೇ ಕ್ರಿಯಾಶೀಲವಾಗಿದೆ ಎಂದು ನಮ್ರತೆಯಿಂದ ಹೇಳಬಯಸುತ್ತೇನೆ" ಎಂದಿರುವರಾದರೂ ಕೃತಿ ಓದಿದ ನಂತರ ಈ ಮಾತುಗಳಿಗೆ ಅದೇ ಅರ್ಥವೇ ಇದೆ ಎಂದೆನಿಸುವುದಿಲ್ಲ. ಅವರು ಈ ಪುಸ್ತಕ ಬರೆಯಲು ಆಧರಿಸಿರುವ ಆಕರ ಗ್ರಂಥಗಳೂ ಕೂಡ ಸಾಮ್ರಾಜ್ಯಶಾಹಿ ಪ್ರೇರಿತ ಚಿಂತನೆಗಳ ಗ್ರಂಥಗಳೇ ಆಗಿರುವುದು ಕಾಕತಾಳೀಯವೇನಲ್ಲ. ಮಾವೋ ಜಗತ್ತಿನ ಕಾರ್ಮಿಕರು, ರೈತರು ಇನ್ನಿತರ ಶೋಷಿತ ಜನರಿಗೆ ನೀಡಿದ ಅತ್ಯಮೂಲ್ಯ ಉನ್ನತ ಕೊಡುಗೆಗಳ ಬಗ್ಗೆ ಮಂಗ್ಳೂರ ವಿಜಯರಿಗೆ ಸಾಮಾನ್ಯ ಗ್ರಹಿಕೆಯಿದ್ದಂತೆ ಕಾಣುವುದಿಲ್ಲ. ಬಹುಸಂಖ್ಯಾತ ಪ್ರಜಾತಂತ್ರದ ಕುರಿತು ಆಚರಣೆ ಹಾಗೂ ಆಲೋಚನೆಗಳ ನಡುವಿನ ಗತಿತಾರ್ಕಿಕ ಸಂಬಂಧಗಳ ಕುರಿತು, ಸಮಾಜವಾದಿ ವ್ಯವಸ್ಥೆಯಲ್ಲೂ ವರ್ಗ ಹೋರಾಟ ವೈಚಾರಿಕ ಹಾಗೂ ಸಾಂಸ್ಕೃತಿಕ ನೆಲೆಗಳಲ್ಲಿ ಮುಂದುವರೆಸಬೇಕಾದ ಅವಶ್ಯಕತೆಯ ಕುರಿತು, ಉತ್ಪಾದನೆ ಹಾಗೂ ರಾಜಕೀಯ ನಡುವಿನ ಸಂಬಂಧಗಳ ಕುರಿತು, ಕಾ॥ ಮಾವೋ ಸಿದ್ಧಾಂತೀಕರಿಸಿರುವುದನ್ನು ಮಂಗ್ಳೂರ ವಿಜಯ

ಗಮನಿಸಿದಂತಿಲ್ಲ. ಒಂದು ವೇಳೆ ಗಮನಿಸಿದ್ದರೂ ಬಂಡವಾಳಶಾಹಿ ಮನಸಿಗೆ ಅದನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ.

ಮಾವೋರ ಸೈದ್ಧಾಂತಿಕ ಕೊಡುಗೆಯಾದ ಆಚರಣೆ ಕುರಿತು, ಜನತೆಯ ಪ್ರಜಾತಾಂತ್ರಿಕ ಸರ್ವಾಧಿಕಾರ, ನೂತನ ಪ್ರಜಾಪ್ರಭುತ್ವ ಮೊದಲಾದ ಕೃತಿಗಳಲ್ಲಿ ಅವರ ಪ್ರಭುದ್ಧ ಚಿಂತನೆಗಳ ಗ್ರಹಿಕೆ ಆಗುತ್ತದೆ. ಮಾವೋ ಆಚರಣೆ ಬಗ್ಗೆ ಕೊಟ್ಟ ಮಹತ್ವ ಅರಿವಾಗುತ್ತದೆ. ಇದರ ಬಗ್ಗೆ ಲೇಖಕರು ಜಾಣಕುರುಡು ಪ್ರದರ್ಶಿಸಿ ಮಾವೋರ ಮೇಲೆ ತೀವ್ರವಾದ ವೈಯಕ್ತಿಕ ಧಾಳಿಯನ್ನು ನಡೆಸಿದ್ದಾರೆ. ಮಾವೋರ ವ್ಯಕ್ತಿತ್ವಹರಣವೇ ಈ ಲೇಖಕರ ಉದ್ಧೇಶವಾಗಿದೆ ಎಂಬುದು ಈ ಪುಸ್ತಕ ಓದಿದಾಗ ಅರ್ಥವಾಗುತ್ತದೆ.

ಮಾವೋ ನಿಧನದ ನಂತರ ಬಿರುಸುಗೊಂಡ ಬಂಡವಾಳಶಾಹಿ ವ್ಯವಸ್ಥೆಯ ಪ್ರತಿಷ್ಠಾಪನೆಯಲ್ಲಿ ಡೆಂಗ್ ಮತ್ತವರ ಕೂಟದ ಪಾತ್ರ, ಅದಕ್ಕಾಗಿ ಈ ಕೂಟ ನಡೆಸಿದ ಕೊಲೆ, ಬಂಧನ, ಅಕ್ರಮಗಳೆಲ್ಲಾ ಮಂಗ್ಳೂರ ವಿಜಯರ ಕಣ್ಣಿಗೆ ತಪ್ಪಾಗಿ ಕಾಣುವುದಿಲ್ಲ. ಸಾಂಸ್ಕೃತಿಕ ಕ್ರಾಂತಿ ವಾಸ್ತವವಾಗಿ ಮಾವೋ ಕಾಲದಲ್ಲಿ ಪಕ್ಷದಲ್ಲಿದ್ದ ಬಂಡವಾಳಶಾಹಿ ಹಾದಿಯವರಿಗೆ, ಅಧಿಕಾರಶಾಹಿಗಳಿಗೆ ನಡುಕ ಹುಟ್ಟಿಸಿ ಅವರ ಅಸ್ತಿತ್ವಕ್ಕೆ ಸಮಸ್ಯೆ ಮಾಡಿತ್ತು. ಅದರಲ್ಲಿ ಡೆಂಗ್ ಕ್ಸಿಯೋಪಿಂಗ್ ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದರು. ಸಾಂಸ್ಕೃತಿಕ ಕ್ರಾಂತಿ ಚೀನದ ಜನಸಮೂಹ ತೊಡಗಿಸಿಕೊಂಡ ಸಾಮೂಹಿಕ ಚಳುವಳಿಯಾಗಿತ್ತು. ಮಾವೋ ಇದಕ್ಕೆ ನಾಯಕತ್ವ ವಹಿಸಿದ್ದರು. ಅದರ ಸಾಧನೆಗಳು ಅಭೂತಪೂರ್ವವಾದುದಾಗಿದೆ ಎಂದು ಇಂದು ಜಗತ್ತಿನ ಕಮ್ಯೂನಿಸ್ಟ್ ಕ್ರಾಂತಿಕಾರಿಗಳು ಅಧ್ಯಯನ ಮಾಡಿ ಕಂಡುಕೊಂಡಿದ್ದಾರೆ. ಅದೇ ವೇಳೆಯಲ್ಲಿ ಕೆಲವು ತಪ್ಪುಗಳು ನಡೆದಿರುವುದು ನಿಜ. ಅದರಲ್ಲಿ ಬಂಡವಾಳಶಾಹಿ ಪಥದವರ ಕುತಂತ್ರ ಇದೆ. ಅತಿರೇಕಗಳನ್ನು ಮಾಡಿ ಅದನ್ನು ಸಾಂಸ್ಕೃತಿಕ ಕ್ರಾಂತಿಯ ತಲೆಗೆ ಕಟ್ಟಿ ಅದನ್ನು ಹಾಳುಗೆಡಹುವ ಪ್ರಯತ್ನವಾಗಿತ್ತು. ಇದನ್ನು ತಡೆಗಟ್ಟುವಲ್ಲಿ ಸಮಾಜವಾದಿ ಕ್ರಾಂತಿಕಾರಿಗಳು ಆ ಮಟ್ಟಕ್ಕೆ ವಿಫಲರಾಗಿದ್ದುದು ನಿಜ. ಅಲ್ಲದೆ ಬೃಹತ್ ಜನಸ್ತೋಮ ಪಾಲ್ಗೊಳ್ಳುವ ಚಳುವಳಿಯಲ್ಲಿ ಕೆಲವು ತಪ್ಪುಗಳು ಸಂಭವಿಸುವುದು ಸಹಜ ಕೂಡ. ಅವುಗಳನ್ನೆಲ್ಲಾ ಕಾಲ, ಸಂದರ್ಭ, ವ್ಯಕ್ತಿಗಳ ಹಿನ್ನೆಲೆಗಳ ಮೂಲಕ ವಿಮರ್ಶೆ, ಪರಾಮರ್ಶೆ ನಡೆಸುವುದು ಯೋಗ್ಯವಾಗಿರುತ್ತದೆ. ಮಂಗ್ಳೂರ ವಿಜಯರ ಪುಸ್ತಕದಲ್ಲಿ ಈ ಮಾನದಂಡ ಕಾಣಿಸುವುದಿಲ್ಲ. ಮಂಗ್ಳೂರ ವಿಜಯರ ಬಂಡವಾಳಶಾಹಿ (ಸಾಮ್ರಾಜ್ಯಶಾಹಿ) ಮನಸು ಹಾಗೂ ಕನ್ನಡಕಗಳಿಂದ ಎಲ್ಲವನ್ನೂ ನೋಡಿ ಬರೆಯಲಾಗಿದೆ. ಅದಕ್ಕೆ ಸಾಮಾಜಿಕ ಜವಾಬ್ದಾರಿಯಾಗಲಿ ಬಹುಸಂಖ್ಯಾತ ಜನರ ಹಿತವಾಗಲಿ ಕಾಣುತ್ತಿಲ್ಲ.

ಅವರು ಈ ಪುಸ್ತಕವನ್ನು ಬರೆದ ಸಂದರ್ಭ ಕೂಡ ಗಮನಿಸಬೇಕಾದ್ದೆ. ಯಾಕೆಂದರೆ ಕರ್ನಾಟಕವೂ ಸೇರಿದಂತೆ ಭಾರತದ ಸುಮಾರು ೨೦ ರಾಜ್ಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಾವೋವಾದಿ ಕ್ರಾಂತಿಕಾರಿಗಳು ಇಂದು ಭಾರತದಲ್ಲಿ ಲೂಟಿಕೋರ ಶೋಷಕ ವ್ಯವಸ್ಥೆಯನ್ನು ಬದಲಾಯಿಸುವ ಪರ್ಯಾಯ ಶಕ್ತಿಯಾಗಿ ಬೆಳೆಯುತ್ತಿದ್ದಾರೆ. ಭಾರತದ ಶೋಷಿತ, ದಮನಿತ ಜನಸಮೂಹದ ಬೆಂಬಲ ಅವರಿಗಿದೆ. ದೇಶದ ಒಂದು ಗಣನೀಯ ಭೂಪ್ರದೇಶದಲ್ಲಿ ಜನರ ಕ್ರಾಂತಿಕಾರಿ ರಾಜಕೀಯ ಅಧಿಕಾರವನ್ನು ಮಾವೋವಾದಿಗಳು ನೇತೃತ್ವ ನೀಡಿ ಸ್ಥಾಪನೆ ಮಾಡಿ ಬೆಳೆಸುತ್ತಿದ್ದಾರೆ. ದೇಶದ ಶೋಷಕ ಪ್ರಭುತ್ವ ತನ್ನೆಲ್ಲಾ ಬಲಗಳನ್ನು ಮಾವೋವಾದಿ ಕ್ರಾಂತಿಕಾರಿಗಳನ್ನು ನಾಶಗೊಳಸಲು ಬಳಸಲಾರಂಭಿಸಿದ್ದಾರೆ. ಪ್ರಪಂಚದ ಹಲವಾರು ದೇಶಗಳಲ್ಲಿ ಮಾವೋವಾದಿ ಪಕ್ಷಗಳು ಬೆಳೆಯುತ್ತಿವೆ.

ಇಂದು ಜಗತ್ತಿನಲ್ಲಿ ಸಾಮ್ರಾಜ್ಯವಾದಿಗಳಿಗೆ ಹಾಗೂ ಶೋಷಕ ಆಳುವ ವರ್ಗಗಳಿಗೆ ಸೆಡ್ಡು ಹೊಡೆದಿರುವುದು ಅದರಲ್ಲೂ ತೃತೀಯ ಜಗತ್ತಿನ ದೇಶಗಳಲ್ಲಿ ನೋಡುವುದಾದರೆ ಮಾವೋವಾದಿ ಶಕ್ತಿಗಳೇ ಪ್ರಮುಖವಾಗಿ ಕಾಣುತ್ತವೆ. ಇಂದು ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಮಾವೋವಾದಿ ಶಕ್ತಿಗಳು ಪ್ರಧಾನ ಶತೃಗಳಾಗಿ ಕಾಣುತ್ತಿದ್ದಾರೆ. ಅದಕ್ಕಾಗೇ ಅಮೇರಿಕ ಭಾರತ ಮತ್ತು ನೇಪಾಳದ ಮಾವೋವಾದಿಗಳ ಮೇಲೆ ನಿಷೇಧ ಹೇರಿರುವುದು. ಇಂತಹ ಸಂದರ್ಭದಲ್ಲಿ ಮಂಗ್ಳೂರ ವಿಜಯರಿಗೆ 'ಮಾವೋ ಮರೆಮಾಚಲಾದ ಮುಖ' ಎಂಬ ಪುಸ್ತಕ ಬರೆಯಲು ಪ್ರೇರಣೆ ಒದಗಿದ್ದು. ಆಳುವ ವರ್ಗಗಳಿಗೆ ಹಾಗೂ ಸಾಮ್ರಾಜ್ಯಶಾಹಿಗಳಿಗೆ ಇದು ಬಹಳ ಪ್ರಿಯವಾದ ಕೆಲಸವೇ. ಬಹುಶಃ ಇದಕ್ಕೆ ತಕ್ಕುದಾದ ಪಾರಿತೋಷಕವೂ ಮುಂದಿನ ದಿನಗಳಲ್ಲಿ ಲೇಖಕರಿಗೆ ಸಿಗಬಹುದು.

ಯಾರ ಬಗ್ಗೆಯೂ ಕುರುಡಾಗಿ ನೋಡುವ, ಆರಾಧಿಸುವ, ವಿಮರ್ಶಾತೀತರೆಂದು ಭಾವಿಸುವ ಅಗತ್ಯವೂ ಇಲ್ಲ. ಅದು ಸರಿಯಾದುದು ಕೂಡ ಅಲ್ಲ. ಹಾಗಂತ ಲೂಟಿಕೋರರ ಅಗತ್ಯಗಳನ್ನು ಪೂರೈಸಲು ವಿಮರ್ಶೆಯ ಹೆಸರಿನಲ್ಲಿ ಸುಳ್ಳುಗಳನ್ನು ಬರೆಯುವ, ವಿಕೃತವಾಗಿ ಬರೆಯುವ, ವೈಯಕ್ತಿಕ ದಾಳಿ ಮಾಡುವವರ ಬಗ್ಗೆ ಜನರ ಶತೃಗಳ ಕುರಿತು ತೆಗೆದುಕೊಳ್ಳುವಷ್ಟೇ ಎಚ್ಚರಿಕೆ ತೆಗೆದು ಕೊಳ್ಳಬೇಕಾದುದು ಅಗತ್ಯವೇ ಆಗುತ್ತದೆ.

***21-08-09*** *– ರಂಗರಾಜ್ ಮತ್ತಿಕಟ್ಟಿ*